**ಸಾಕ್ಷಿಯನ್ನು ದಿನಾಂಕ: 07-03-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ವಾದಿ ಪರ ಶ್ರೀ DGT ವಕೀಲರಿಂದ**

1.ವಾದಿಯು ಪ್ರತಿವಾದಿ ವಿರುದ್ದ ಸ.ನ. 6/3 ಕ್ಕೆ ಸಂಬಂಧಿಸಿದಂತೆ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ಸ. ನಂ ಪಶ್ಚಿಮಕ್ಕೆ ನೀಲಗಿರಿ ತೋಪು. ಪೂರ್ವಕ್ಕೆ ನನಗೆ ಸೇರಿದ ಜಮೀನು, ಉತ್ತರಕ್ಕೆ ನೀಲಗಿರಿ ತೋಪು, ದಕ್ಷಿಣಕ್ಕೆ ಹನುಮಂತರಾಯಪ್ಪ ಮತ್ತು ನರಸಪ್ಪರವರ ಜಮೀನು ಬರುತ್ತದೆ. ದಾವಾ ಆಸ್ತಿಯು ಮೂಲತಃ ವಾಗಿ ಶಿವಲಿಂಗಪ್ಪ ಮತ್ತು ನಂಜುಂಡಪ್ಪರವರಿಗೆ ಸೇರಿದ್ದಾಗಿತ್ತು. ಶಿವಲಿಂಗಪ್ಪರವರನ್ನು ನಾನು ನೋಡಿದ್ದು ಅವರಿಗೆ 3 ಜನ ಮಕ್ಕಳು. ಸದರಿ 3 ಜನರು ಅವರು ಜೀವಂತ ಇದ್ದಾಗ ಒಟ್ಟು ಕುಟುಂಬದಲ್ಲಿದ್ದು ಅವರ ಕುಟುಂಬದ ಆಸ್ತಿಗಳನ್ನು ಒಟ್ಟಾಗಿ ಅನುಭವಿಸುತ್ತಿದ್ದರು.

2. ಶಿವಲಿಂಗಪ್ಪನ ಕುಟುಂಬಕ್ಕೆ ದಾವಾ ಆಸ್ತಿಯನ್ನು ಬಿಟ್ಟು ಬೇರೆ ಆಸ್ತಿ ಇರಲಿಲ್ಲ. ಪೂರ್ವಕೆ ಸ.ನ 7, ಪಶ್ಚಿಮ ಮತ್ತು ಉತ್ತರಕ್ಕೆ ಸಿದ್ದರಾಮಯ್ಯನ ಮಗ ವೀರನಾಗಯ್ಯನ ಜಮೀನು, ದಕ್ಷಿಣಕ್ಕೆ ಮಡಿವಾಳ ಹನುಮಂತಯ್ಯರವರ ಜಮೀನಿನ ಚಕ್ಕು ಬಂದಿ ಒಳಗಿನ ಜಮೀನಿನಲ್ಲಿ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆ. ಪಶ್ಚಿಮಕ್ಕೆ ನೀಲಗಿರಿ ತೋಪು. ಪೂರ್ವಕ್ಕೆ ನನಗೆ ಸೇರಿದ ಜಮೀನು, ಉತ್ತರಕ್ಕೆ ನೀಲಗಿರಿ ತೋಪು, ದಕ್ಷಿಣಕ್ಕೆ ಹನುಮಂತರಾಯಪ್ಪ ಮತ್ತು ನರಸಪ್ಪರವರ ಜಮೀನಿನ ಚಕ್ಕುಬಂದಿ ಒಳಗೆ ಬರುವ ಜಮೀನಿನಲ್ಲಿ ವೀರನಾಗಪ್ಪರವರು ಸ್ವಾಧೀನದಲ್ಲಿರುತ್ತಾರೆ. ದಾವಾ ಆಸ್ತಿಯಲ್ಲಿ ಪ್ರತಿವಾದಿಯು ಸ್ವಾಧೀನದಲ್ಲಿರುವುದಿಲ್ಲ, ಸದರಿ ಆಸ್ತಿಯನ್ನು ಪ್ರತಿವಾದಿಯ ಗಂಡ ವಾದಿಯ ಅಜ್ಜಿಗೆ 1963 ರಲ್ಲಿ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಆ ರೀತಿ ಮಾರಾಟ ಮಾಡಿದಾಗ ಆಸ್ತಿಯ ಸ್ವಾಧೀನವನ್ನೂ ಸಹಾ ವಾದಿಯ ಅಜ್ಜಿಗೆ ಬಿಟ್ಟುಕೊಟ್ಟಿರುತ್ತಾರೆಂದರೆ ಸರಿಯಲ್ಲ. ವಾದಿಯ ಅಜ್ಜಿಯ ಜೀವಿತಾವಧಿಯಲ್ಲಿ ಅವರೇ ಸ್ವಾಧೀನದಲ್ಲಿದ್ದು, ಅವರ ನಂತರ ಅವರ ಮಕ್ಕಳು ಮತ್ತು ಅವರ ಮೊಮ್ಮಕ್ಕಳು

ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಗೆ ಯಾವುದೇ ಹಕ್ಕು ಅಧಿಕಾರ ಸ್ವಾಧೀನ ಇಲ್ಲದೇ ಇದ್ದರೂ ವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**